(ಕಂದಾಯ ಇಲಾಖೆ)

# ಸಹಾಯಕ ಆಯುಕ್ತರವರ ನ್ಯಾಯಾಲಯ, ಹೊಸಪೇಟೆ

ಎ.ವಿಲೇ.ನಂ.ಕಂ.ಪಹಣಿ.ಅಪೀಲು:93/2013-14 ದಿನಾಂಕ:08.09.2016.

**ಉಪಸ್ಥಿತರು: ಡಾ. ಅವಿನಾಶ್ ಮೆನನ್ ರಾಜೇಂದ್ರನ್, ಭಾ.ಆ.ಸೇ**
**ಸಹಾಯಕ ಆಯುಕ್ತರು, ಹೊಸಪೇಟೆ**

**ವಾದಿಗಳು: ಶ್ರೀ/ ಶ್ರೀಮತಿ**

1. ಶಿವಶಂಕರ್.ಓ. ತಂದೆ ಲೇಟ್ ಸಣ್ಣೋಬಯ್ಯ,
   ವಾಸ: ಕೆ.ಬಿ.ಹಟ್ಟಿ ಪೂಜಾರಹಳ್ಳಿ
   ಕೂಡ್ಲಿಗಿ ತಾಲೂಕು.

[ಶ್ರೀ ವೈ.ಹನುಮಂತಪ್ಪ, ವಕೀಲರು, ಜಗಳೂರು]

**ಪ್ರತಿವಾದಿಗಳು: ಶ್ರೀ/ ಶ್ರೀಮತಿ**

1. ಚಿನ್ನಬಸಮ್ಮ ಗಂಡ ಚಿನ್ನಪ್ಪಗಾರಿ ಬಸಪ್ಪ,
   ವಾಸ: ಜುಮ್ಮೋಬನಹಳ್ಳಿ ಗ್ರಾಮ,
   ಕೂಡ್ಲಿಗಿ ತಾಲೂಕು.
2. ತಹಶೀಲ್ದಾರರು, ಕೂಡ್ಲಿಗಿ.

********

**ವ್ಯಾಜ್ಯದ ಜಮೀನು:**

| ತಾಲೂಕು | ಹೋಬಳಿ | ಗ್ರಾಮ | ಸ.ನಂ. | ವಿಸ್ತೀರ್ಣ |
|---|---|---|---|---|
| ಕೂಡ್ಲಿಗಿ | ಹೊಸಹಳ್ಳಿ | ಜುಮ್ಮೋಬನಹಳ್ಳಿ | 571/ಡಿ | 32 ಎಕರೆ 20 ಸೆಂಟ್ಸ್ |
| | | | 572/ಜಿ | 01 ಎಕರೆ 23 ಸೆಂಟ್ಸ್ |
| | | | 571/ಜಿ | 01 ಎಕರೆ 23 ಸೆಂಟ್ಸ್ |

**ಪೀಠಿಕೆ:**

ಕೂಡ್ಲಿಗಿ ತಾಲೂಕು ಹೊಸಹಳ್ಳಿ ಹೋಬಳಿ ಜುಮ್ಮೋಬನಹಳ್ಳಿ ಗ್ರಾಮದ ಸ.ನಂ.571/ಡಿ ವಿಸ್ತೀರ್ಣ: 32 ಎಕರೆ 20 ಸೆಂಟ್ಸ್; ಸ.ನಂ.572/ಜಿ ವಿಸ್ತೀರ್ಣ: 01 ಎಕರೆ 23 ಸೆಂಟ್ಸ್; ಸ.ನಂ.571/ಜಿ ವಿಸ್ತೀರ್ಣ: 01 ಎಕರೆ 23 ಸೆಂಟ್ಸ್; ವಿವಾದಾಸ್ಪದ ಜಮೀನುಗಳಿಗೆ ಸಂಬಂಧಿಸಿದಂತೆ ಕಂದಾಯ ನಿರೀಕ್ಷಕರು, ಹೊಸಹಳ್ಳಿ ಇವರ ಹಕ್ಕು ಬದಲಾವಣೆ ಆದೇಶ ಸಂಖ್ಯೆ: ಎಂ.ಆರ್.ನಂ.:20/1994-95; ಎಂ.ಆರ್.ನಂ.:06/1994-95; ಎಂ.ಆರ್.ನಂ.:13/2003-04 ದಿನಾಂಕ:07.02.2014; ಎಂ.ಆರ್.ನಂ.:18/2008-09 ದಿನಾಂಕ:04.04.2009 ವನ್ನು ಪ್ರಶ್ನಿಸಿ ಕರ್ನಾಟಕ ಭೂ ಕಂದಾಯ ಕಾಯ್ದೆ 1964 ರ ಕಲಂ 136[2] ರಡಿಯಲ್ಲಿ ಮೇಲ್ಮನವಿಯನ್ನು ವಾದಿಪರ ವಕೀಲರು ಸಲ್ಲಿಸಿರುತ್ತಾರೆ.

ವಾದಿಗಳ ಪರ ವಕೀಲರು ಸಲ್ಲಿಸಿದ ದಾಖಲೆಗಳನ್ನು ಪರಿಶೀಲಿಸಿ, ನೈಸರ್ಗಿಕ ನ್ಯಾಯದ ಹಿತದೃಷ್ಟಿಯಿಂದ ಪ್ರಕರಣದ ವಿಚಾರಣೆಯನ್ನು ದಿನಾಂಕ:22.10.2013 ಕ್ಕೆ ನಿಗಧಿಪಡಿಸಿ ಉಭಯಪಕ್ಷಗಳಿಗೆ ನೋಟೀಸು ಮೂಲಕ ತಿಳಿಸಿ ವಿಚಾರಣೆಯನ್ನು ಪ್ರಾರಂಭಿಸಲಾಯಿತು.

ಆದರೆ, ವಿಚಾರಣೆ ಪ್ರಾರಂಭಿಸಿದಾಗಿನಿಂದ ಉಭಯ ಪಕ್ಷಗಾರರು ಸತತವಾಗಿ ಗೈರುಹಾಜರಾಗಿದ್ದು, ಪ್ರಕರಣದಲ್ಲಿ ಆಸಕ್ತಿ ಇಲ್ಲದೇ ಇರುವುದು ಕಂಡುಬಂದಿರುತ್ತದೆ. ಆದುದರಿಂದ, ಪ್ರಕರಣವನ್ನು ಇದೇ ಹಂತದಲ್ಲಿ ಮುಕ್ತಾಯಗೊಳಿಸಲು ಈ ಕೆಳಕಂಡಂತೆ

## -:ಆದೇಶ:-

ಪೀಠಿಕೆಯಲ್ಲಿ ವಿವರಿಸಿದ ಸಂದರ್ಭ, ವಾಸ್ತವಾಂಶ, ಹಿನ್ನಲೆ ಮತ್ತು ಕಾರಣಗಳ ಆಧಾರದ ಮೇಲೆ ಉಭಯ ಪಕ್ಷಗಾರರು ಸತತವಾಗಿ ಗೈರುಹಾಜರಾಗಿರುವುದರಿಂದ, ಸದರಿ ಅಪೀಲನ್ನು ಇದೇ ಹಂತದಲ್ಲಿ ಮುಕ್ತಾಯಗೊಳಿಸಲಾಗಿದೆ. (dismissed for default).

ಈ ಆದೇಶವನ್ನು ಹೇಳಿ ಬರೆಯಿಸಿ, ಗಣಕೀಕರಣ ಮಾಡಿಸಿ, ತಪ್ಪುಗಳನ್ನು ಸರಿಪಡಿಸಿ, ಈ ದಿನ ದಿನಾಂಕ:08.09.2016 ರಂದು ತೆರೆದ ನ್ಯಾಯಾಲಯದಲ್ಲಿ ಘೋಷಿಸಿದೆ.

[ಡಾ. ಅವಿನಾಶ್ ಮೆನನ್ ರಾಜೇಂದ್ರನ್, ಭಾ.ಆ.ಸೇ]
ಸಹಾಯಕ ಆಯುಕ್ತರು,
ಹೊಸಪೇಟೆ

ವಾದಿ : ಪ್ರತಿವಾದಿಗಳಿಗೆ
ಪ್ರತಿಯನ್ನು: ತಹಶೀಲ್ದಾರರು, ಕೂಡ್ಲಿಗಿ ಇವರಿಗೆ ಸಂಬಂಧಿಸಿದ ಮೂಲ ಕಡತದೊಂದಿಗೆ
ಸೂಕ್ತ ಕ್ರಮಕ್ಕಾಗಿ ರವಾನಿಸಿದೆ.